ಲೋಯರ್ ಮುಲ್ಲಾಮಾರಿ ಯೋಜನೆಗೆ ಆಯವ್ಯಯದಲ್ಲಿ ನಿಗದಿ ಪಡಿಸಲಾದ ಹಣ

226 (2361) ಶ್ರೀ ಕೈಲಾಸ್‌ನಾರ್ಥ ಪಾಟೀಲ್ (ಚಿಂಚೋಳಿ):ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಲೋಯರ್ ಮುಲ್ಲಾಮಾರಿ ಯೋಜನೆಗೆ 2000-2001 ಆಯವ್ಯಯದಲ್ಲಿ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ;

ಆ)ಈ ಯೋಜನೆಯಲ್ಲಿ ಮುಳುಗಡೆಯಾಗಲಿರುವ ಗಡಿಲಂಗದಳ್ಳಿ ಗ್ರಾಮದ ಪುನರ್ ವಸತೀಕರಣ ಮಂದಗತಿಯಲ್ಲಿ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ)ಈ ಯೋಜನೆಯಲ್ಲಿ ಭಾಗಶಃ ಮುಳುಗಡೆಯಾಗಲಿರುವ ಕೊಟಗಾ ಗ್ರಾಮದ ಬಗ್ಗೆ ಸರ್ಕಾರ ಇಲ್ಲಿಯವರೆಗೆ ತೆಗೆದುಕೊಂಡ ಕ್ರಮ ಏನು?

ಶ್ರೀ ಎಚ್.ಕೆ ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ)ಲೋಯರ್ ಮುಲ್ಲಾಮಾರಿ ಯೋಜನೆಗೆ 2000-2001ನೇ ಸಾಲಿಗೆ ರೂ.985.74 ಲಕ್ಷಗಳನ್ನು ನಿಗದಿ ಪಡಿಸಲಾಗಿದೆ.

ಆ)ಈ ಪುನರ್ವಸತಿ ಕೇಂದ್ರಗಳಿಗೆ ಬೇಕಾದ ಜ ಮೀನುಗಳಿಗಾಗಿ ಮೇ 99ರಲ್ಲಿ ಪರಿಹಾರದ ಪಾವತಿ ಮಾಡಲಾಗಿದೆ. ಕೆಲವು ಕೆಲಸಗಳು ಪ್ರಗತಿಯಲ್ಲಿವೆ ತದನಂತರ ಪುನರ್ವಸತಿಗಾಗಿ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸಲು ಅಂದಾಜು ಪಟ್ಟಿಗಳನ್ನು ತಯಾರಿಸಿ ಟೆಂಡರ್‌ಗಳನ್ನು ಕರೆಯಲಾಗಿದೆ. ಅವು ಒಪ್ಪಿಗೆಯ ಹಂತದಲ್ಲಿವೆ.

ಇ) ಪುನರ್ವಸತಿ ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಗ್ರಾಮದ ಪುನರ್ವಸತಿಗಾಗಿ ರೂ.375.00 ಲಕ್ಷಗಳು ಅಂದಾಜಿಸಲಾಗಿದೆ. 2000-2001ನೇ ಸಾಲಿನಲ್ಲಿ ಈ ಗ್ರಾಮದ ಪುನರ್ವಸತಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಕೈಲಾಸನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಬರತಕ್ಕಂಥ ಲೋಯರ್ ಮುಲ್ಲಾ ಮಾರಿ ಯೋಜನೆ 1978ನೇ ಇಸವಿಯಿಂದ ಇಲ್ಲಿಯವರೆಗೆ ನಡೆದುಕೊಂಡು ಬಂದಿದೆ. ಈ ವರ್ಷದಲ್ಲಿ ಆದು ಪೂರ್ಣವಾಗುವಂತಹ ಒಂದು ಅವಕಾಶ ನಮ್ಮ ಮುಂದೆ ಇದೆ. ಈ ಯೋಜನೆ ಪೂರ್ಣವಾಗಬೇಕಾದರೆ, ಈ ಯೋಜನೆಯಡಿಯಲ್ಲಿ ಮುಳುಗಡೆಯಾಗುವಂತಹ ಗಡಿಲಿಂಗದಳ್ಳಿ ಎನ್ನುವ ಗ್ರಾಮ ಪುನರ್‌ವಸತಿಯಾದರೆ ಮಾತ್ರ ಈ ಯೋಜನೆ ಪೂರ್ಣವಾಗುತ್ತದೆ. ಇಲ್ಲದೇ ಹೋದರೆ ಪೂರ್ಣವಾಗುವುದು ಕಷ್ಟವಿದೆ. ಹಾಗೂ ಕೊಟಗಾ ಎನ್ನುವ ಇನ್ನೊಂದು ಹಳ್ಳಿ ಈ ಯೋಜನೆಯ ಡಿಯಲ್ಲಿ ಭಾಗಶಃ ಮುಳುಗಡೆಯಾಗುತ್ತದೆ, ಪೂರ್ಣ ಮುಳುಗಡೆಯಾಗುವುದಲ್ಲ. ಆದರೂ ಮಾನವೀಯ ದೃಷ್ಟಿಯಿಂದ ಈ ಹಳ್ಳಿಯನ್ನು ಸಂಪೂರ್ಣವಾಗಿ ಸ್ಥಳಾಂತರಿಸಬೇಕು ಎನ್ನುವ ವಿಚಾರವನ್ನು ನಾವು ಕಳೆದ ಐದು ಲವರ್ಷಗಳಿಂದ ಹೇಳುತ್ತಾ ಬಂದಿದ್ದೇವೆ. ಹಿಂದಿನ ಸರ್ಕಾರದಲ್ಲಿ ಇದ್ದಂತಹ ಸನ್ಮಾನ್ಯ ಮಂತ್ರಿಗಳಾದ ನಾಗೇಗೌಡರು ಕೂಡ ಇದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದರು. ಆದರೆ ಇದುವರೆಗೂ ಯಾವುದೇ ಕ್ರಮ ಜರುಗಿಸಿಲ್ಲವೆಂದು ತಮ್ಮ ಮೂಲಕ ಮಾನ್ಯ ನೀರಾವರಿ ಸಚಿವರಿಗೆ ಹೇಳುವುದಕ್ಕೆ

ಇಚ್ಛೆಪಡುತ್ತೇನೆ. ಆದಷ್ಟು ಬೇಗೆ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು ಮತ್ತು ಗಡಿಲಿಂಗದಳ್ಳಿ ಗ್ರಾಮದ ಪುನರ್‌ವಸತಿ ಕೇಂದ್ರದಲ್ಲಿ ಕೆಲಸ ನಿಂತುಹೋಗಿದೆ. ಅಲ್ಲಿ ಯಾವ ಪ್ರಗತಿಯಾಗಿಲ್ಲ. ರೋಡ್ ಆಗಿಲ್ಲ ಮತ್ತು ಸಾರ್ವಜನಿಕ ಸೌಲಭ್ಯಗಳಾದ ಸ್ಕೂಲ್ ಈ ರೀತಿಯಾದ ಯಾವುದೇ ಕೆಲಸ ಅಲ್ಲಿ ಆಗಿಲ್ಲ. ಆದುದರಿಂದ ಈ ಗ್ರಾಮ ಪುನರ್‌ವಸತಿಯಾಗುವುದಕ್ಕೆ ಕಷ್ಟವಾಗಿದೆ. ಎರಡು ಪುನರ್‌ವಸತಿ ಕೇಂದ್ರ ಒಂದೇ ಗ್ರಾಮಕ್ಕೆ ಬರುತ್ತದೆ. ಅದಕ್ಕೆ ಮೂರನೇ ಪುನರ್ವಸತಿ ಕೇಂದ್ರದ ಆವಶ್ಯಕತೆ ಇದೆ ಎನ್ನುವುದನ್ನು ಅಲ್ಲಿನ ಅಧಿಕಾರಿಗಳಿಗೂ ಮನದಟ್ಟು ಮಾಡಿಕೊಟ್ಟಿದ್ದೇವೆ. ಅದರ ಬಗ್ಗೆ ಕೂಡ ಯಾವ ಕ್ರಮ ತೆಗೆದುಕೊಂಡಿಲ್ಲ. ಆದುದರಿಂದ ಮಾನ್ಯ ನೀರಾವರಿ ಸಚಿವರು ಇದರ ಬಗ್ಗೆ ತೀವ್ರವಾಗಿ ಗಮನಹರಿಸಿ ಕಾರ್ಯೋನ್ಮುಖರಾಗಬೇಕೆಂದು ತಿಳಿಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಲೋಯರ್ ಮುಲ್ಲಾಮಾರಿ ಯೋಜನೆಯಲ್ಲಿ ಮುಳುಗಡೆಯಾಗತಕ್ಕಂಥ ಹಳ್ಳಿಗಳಿಗೆ ಪುನರ್‌ವಸತಿ ಕೆಲಸ ನಿಧಾನವಾಗಿದ್ದು ನಿಜ. ಇದಕ್ಕೆ ಪುನರ್ವಸತಿ ಸಮಿತಿಯನ್ನು ಸಹ ನಾವು ನೇಮಿಸಬೇಕಾಗಿತ್ತು, ಅದು ಕೆಲಸ ಮಾಡುತ್ತಿಲ್ಲ, ಈಗ ಅದನ್ನು ಪುನರಚಿಸಿ ಅದರಲ್ಲಿ ಸಂಬಧಪಟ್ಟರತಕ್ಕಂಥ ಆ ಕ್ಷೇತ್ರದ ಶಾಸಕು ಹಾಗೂ ಪಾರ್ಲಿಮೆಂಟರಿ ಸದಸ್ಯರು ಸಹ ಅದರಲ್ಲಿ ಇರುತ್ತಾರೆ. ತಾವೇನು ಪುನರ್ವಸತಿ ಸಮಿತಿ ಶಿಫಾರಸ್ಸು ಕಳುಹಿಸಿಕೊಟ್ಟಿದ್ದೀರಿ, ಅದರ ಮೇಲೆ ನಾವು ಕಾರ್ಯಕ್ರಮಗಳನ್ನು ಜರುಗಿಸುತ್ತೇವೆ. ಇನ್ನೊಂದು ತಿಂಗಳೊಳಗಾಗಿ ಪುನರ್ವಸತಿ ಸಮಿತಿಯನ್ನು ನೇಮಕ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಸಂಖ್ಯೆ :227 (2514)ಕ್ಕೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರಗಳನ್ನು ಸದಸ್ಯರಿಗೆ ಕಳುಹಿಸಿಕೊಟ್ಟಿದ್ದೀರಾ?

ಶ್ರೀ ಬಾಬುರಾವ್ ಚಿಂಚನನೂರ್ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದೆ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಆಫೀಸಿನಲ್ಲಿ ಎಲ್ಲಾ ಹುಡುಕಿಸಿದೆ.

ಅಧ್ಯಕ್ಷರು : ಈ ಪ್ರಶ್ನೆಯನ್ನು ಕೊನೆಯಲ್ಲಿ ತೆಗೆದುಕೊಳ್ಳೋಣ.

ಸಕಲೇಶಪುರ ತಾಲ್ಲೂಕು ಬ್ಯಾಕರವಳ್ಳಿ ಅನೆಮಹಲ್‌ರಸ್ತೆ ಹೇಮಾವತಿ ಪ್ರಾಜೆಕ್ಟ್ ಅಡಿಯಲ್ಲಿ ಕೆಲಸ ಮಾಡಿರುವ ಬಗ್ಗೆ

231 (2526) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

A)ಸಕಲೇಶಪುರ ತಾಲ್ಲೂಕು ಬ್ಯಾಕರವಳ್ಳಿ ಅನೆ ಮಹಲ್ ರಸ್ತೆ, ಹೇಮಾವತಿ ಪ್ರಾಜೆಕ್ಟ್ ಅಡಿಯಲ್ಲಿ ಕೆಲಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

B)ಇದಕ್ಕೆ ಮಂಜೂರಾದ ಹಣವೆಷ್ಟು;

C)ಇದುವರೆಗೆ ಖರ್ಚಾಗಿರುವ ಹಣವೆಷ್ಟು;